**<u>1 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.</u>**

**<u>ಸಿ.ಸಿ. ಸಂಖ್ಯೆ:714/2025</u>**

**ಸಾಕ್ಷಿಯನ್ನು ದಿಃ 29.05.2026 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

| | | | |
|---|---|---|---|
| ಹೆಸರು | ನಂಜುಂಡಾಚಾರಿ | ಸಿಡಬ್ಲ್ಯೂ:2 | ಪಿಡಬ್ಲ್ಯೂ:2 |
| ತಂದೆಯ ಹೆಸರು | ಲೇಟ್ ಶಿವನಂಜಾಚಾರಿ | | |
| ವಯಸ್ಸು | 70 ವರ್ಷ | | |
| ಉದ್ಯೋಗ | ವ್ಯವಸಾಯ | | |
| ವಾಸಸ್ಥಳ | ಮಧುಗಿರಿಕೊಪ್ಪಲು ಗೇಟ್.<br>ಹುಣಸೂರು. | | |

**<u>ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ</u>**

ಅಣ್ಣಯ್ಯಾಚಾರಿ ನನ್ನ ಅಣ್ಣ, ಅವರು ಅಪಘಾತದಲ್ಲಿ ತೀರಿಕೊಂಡಿರುತ್ತಾರೆ. ದಿಃ 27.03.2025 ರಂದು ಜಮೀನಿಗೆ ಹೋಗಿ, ಜಮೀನಿನಿಂದ ಕೆಲಸ ಮುಗಿಸಿಕೊಂಡು ವಾಪಸ್ಸು ಬರುವಾಗ ಸಂಜೆ 7.30 ಗಂಟೆ ಸಮಯದಲ್ಲಿ ಹುಣಸೂರು ಕಡೆಯಿಂದ ಮೈಸೂರು ಕಡೆ ರಸ್ತೆ ಕಡೆಗೆ ಬರುತ್ತಿರುವಾಗ ಅವರ ಹಿಂದಿನಿಂದ ಸ್ಕೂಟರ್ ಬಂದು ಡಿಕ್ಕಿ ಪಡಿಸಿತು,ಆಗ ನಾವು ಅಲ್ಲಿಯೆ ಮನೆಯ ಹತ್ತಿರ ಕುಳಿತಿದ್ದು, ಶಬ್ದ ಕೇಳಿ ಅಲ್ಲಿಗೆ ಬಂದಿದ್ದು, ಸ್ಕೂಟರ್ ಚಾಲಕನೂ ಬಿದ್ದಿದ್ದ, ಅವನಿಗೂ ಪೆಟ್ಟಾಗಿತ್ತು. ಅಣ್ಣಯ್ಯಚಾರಿ ಮುಖಕ್ಕೆ ಮತ್ತು ಪಕ್ಕೆಗೆ ಏಟಾಗಿತ್ತು, ಕಾಲು, ಕೈ ಮುರಿದಿತ್ತು. ಬೈಕ್ ಸವಾರನಿಗೂ ಮತ್ತು ಅಣ್ಣಯ್ಯಾಚಾರಿ ಇಬ್ಬರನ್ನು ಆಂಬ್ಯೂಲೆನ್ಸ್ ಕರೆದುಕೊಂಡು ಹೋಗಿ ಹುಣಸೂರಿನ ಕಾವೇರಿ ಆಸ್ಪತ್ರೆಗೆ ದಾಖಲು ಮಾಡಿದೇವು. ಆದರೆ ಅಣ್ಣಯ್ಯಾಚಾರಿಗೆ ಸದರಿ ಆಸ್ಪತ್ರೆಯಲ್ಲಿ ದಾಖಲಿಸಿಕೊಳ್ಳಲಿಲ್ಲ, ಮೈಸೂರಿನ ಡಿ.ಆರ್.ಎಂ. ಆಸ್ಪತ್ರೆಗೆ

ಕರೆದುಕೊಂಡು ಹೋದೆವು. ಅಲ್ಲಿ ಒಂದು ವಾರಗಳ ವರೆಗೆ ಚಿಕಿತ್ಸೆ ತೆಗೆದುಕೊಳ್ಳುತ್ತಿದ್ದರು. ದಿಃ 04.04.2025 ರಂದುಅಣ್ಣಯ್ಯಾಚಾರಿ ಚಿಕಿತ್ಸೆ ಫಲಕಾರಿಯಾಗದೆ ಮೃತ ಪಟ್ಟರು. ಆ ಸಂಬಂಧ ಅವರ ಮಗ ದೂರು ಕೊಟ್ಟಿರುತ್ತಾನೆ. ಬೈಕ್ ಸವಾರನ ಹೆಸರು ಗೊತ್ತಾಯಿತು ಆದರೆ ಈಗ ನನಗೆ ನೆನಪಿಲ್ಲ, ಆದರೆ ಅವನನ್ನು ನೋಡಿರುತ್ತೇನೆ. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಆತನೆ ಆ ದಿನ ಬೈಕ್ ಸವಾರ ಆಗಿದ್ದ ಎಂದು ನೋಡಿ ಗುರುತಿಸಿರುತ್ತಾರೆ.

ಪೊಲೀಸರು ದಿಃ 05.04.2025 ರಂದು ಅಪಘಾತದ ಸ್ಥಳಕ್ಕೆ ಬಂದು ಮಹಜರ್ ಮಾಡಿರುತ್ತಾರೆ. ಸ್ಥಳ ಮಹಜರ್ ನಲ್ಲಿ ಇರುವ ಸಹಿ ನೋಡಿ ಗುರುತಿಸಿದ್ದರಿಂದ, ಸದರಿ ದಾಖಲೆಯನ್ನು ನಿಪಿ. 7 ಎಂದು, ಸಾಕ್ಷಿಯ ಸಹಿಯನ್ನು ನಿಪಿ. 7(ಎ) ಎಂದು ಗುರುತಿಸಲಾಯಿತು. ಸ್ಥಳ ಮಹಜರ್ ಸಮಯದಲ್ಲಿ ನನ್ನ ಜೊತೆ ಚಾಸಾ 1, ಚಾಸಾ 3 ನಂದಕುಮಾರ್ ಮತ್ತು ಸುಮಾರು ಜನ ಇದ್ದೇವು. ಆಗ ಸಮಯ ಮಧ್ಯಾಹ್ನದ ವೇಳೆ ಆಗಿತ್ತು. ಸ್ಥಳದಲ್ಲಿ ತೆಗೆದ 2 ಪೋಟೊ ನೋಡಿ ಗುರುತಿಸಿದ್ದರಿಂದ ಅವುಗಳನ್ನು ನಿಪಿ. 8 ಮತ್ತು 9 ಎಂದು ಗುರುತಿಸಲಾಯಿತು. ಈ ವಿಚಾರವಾಗಿ ನಾನು ಪೊಲೀಸರ ಮುಂದೆ ಹೇಳಿಕೆ ಕೊಟ್ಟಿರುತ್ತೇನೆ.

ಸಾಕ್ಷಿಗೆ ಇನ್ನೊಂದು ದಾಖಲೆ ತೋರಿಸಲಾಗಿ ಅದು ಅಮಾನತ್ತು ಮಹಜರ್ ಆಗಿದ್ದು, ಅದರಲ್ಲಿ ತನ್ನ ಸಹಿ ನೋಡಿ ಗುರುತಿಸಿದ್ದರಿಂದ, ಸದರಿ ದಾಖಲೆಯನ್ನು ನಿಪಿ. 10 ಎಂದು, ಸಾಕ್ಷಿಯ ಸಹಿಯನ್ನು ನಿಪಿ. 10(ಎ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಪೊಲೀಸ್ ಠಾಣೆಯಲ್ಲಿ ಮಾಡಿರುತ್ತೇನೆ. ಆ ಸಮಯದಲ್ಲಿ ಪೊಲೀಸರು ಸ್ಕೂಟರ್ ಅನ್ನು ಅಮಾನತ್ತು ಪಡಿಸಿಕೊಂಡರು. ಆ ಸಮಯದಲ್ಲಿ ನಾನು, ಚಾಸಾ 1 ಮತ್ತು 3 ರವರು ಇದ್ದೇವು. ಠಾಣೆಯಲ್ಲಿ ತೆಗೆದ 1 ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ.11 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಮಾನ್ಯ ಸಸಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿ ತನ್ನ ಸಾಕ್ಷ್ಯವನ್ನು ಅಭಿಯೋಜನೆಗೆ ಪ್ರತಿಕೂಲವಾಗಿ ನುಡಿದಿರುವ ಕಾರಣ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿಸಲಾಯಿತು)**

**ಪಾಟೀಸವಾಲು ಸಸಅ ರವರಿಂದಃ–**

ಪೊಲೀಸರು ಸ್ಥಳ ಮಹಜರ್ ಗೆಂದು ಸ್ಥಳಕ್ಕೆ ಬಂದ ದಿಃ 29.03.2025 ಎಂದರೆ ಸರಿ. ಆಗ ಸಮಯ ಬೆಳಿಗ್ಗೆ 9.30 ರಿಂದ 10.30 ಆಗಿತ್ತು ಎಂದರೆ ಸರಿಯಲ್ಲ. ಸಾಕ್ಷಿ ಪುನಃ ಮಧ್ಯಾಹ್ನ 12.00 ರಿಂದ 1.00 ಗಂಟೆ ಆಗಿತ್ತು ಎನ್ನುತ್ತಾರೆ. ಸ್ಥಳ ಮಹಜರ್ ಮಾಡುವ ಸಮಯದಲ್ಲಿ ಚಾಸಾ 5 ಮತ್ತು 6 ರವರು ಕೂಡ ಇದ್ದರು ಎಂದರೆ ಸರಿ. ದಿಃ 31.03.2025 ರಂದು ಪೊಲೀಸ್ ಠಾಣೆಯಲ್ಲಿ ನಾನು ಸಹಿ ಮಾಡಿದ್ದೇಲನ ಎಂದರೆ ಸರಿ. ಆಗ ಸಮಯ 11.30. ರಿಂದ 12.00 ಆಗಿತ್ತು ಎಂದರೆ ಸರಿ. ಆಗಲೂ ಕೂಡ ಚಾಸಾ 5 ಮತ್ತು 6 ರವರು ಹಾಜರಿದ್ದರು ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಈ.ಬಿ.ಆರ್ ವಕೀಲರಿಂದಃ**

ನನಗೆ ಕನ್ನಡ ಓದಲು ಮತ್ತು ಬರೆಯಲು ಬರುತ್ತದೆ. ಅಪಘಾತದ ಆದ ನಂತರ ಅಣ್ಣಯ್ಯಾಚಾರಿ ಮತ್ತು ಸ್ಕೂಟರ್ ಚಾಲಕನನ್ನು ಹುಣಸೂರಿನ ಕಾವೇರಿ ಆಸ್ಪತ್ರೆಗೆ ಆಂಬ್ಯೂಲೆನ್ಸ್ ನಲ್ಲಿ ಕರೆದುಕೊಂಡು ಬಂದು ಸೇರಿದ್ದೇವು ಎಂದು ನ್ಯಾಯಾಲಯದ ಮುಂದೆ ಇದೆ ಮೊದಲ ಬಾರಿ ಹೇಳುತ್ತಿದ್ದೇನೆ ಎಂದರೆ ಸರಿ. ಮುಖ್ಯ ವಿಚಾರಣೆಯಲ್ಲಿ ಹೇಳಿರುವುದನ್ನು ಈಗ ನ್ಯಾಯಾಲಯದ ಮುಂದೆ ಹೇಳಿರುವುದನ್ನು ಹೊರತು ಪಡಿಸಿ ಬೇರೆಯಲ್ಲಿಯೂ ಹೇಳಿಲ್ಲ ಎಂದರೆ ಸರಿ. ಅಪಘಾತದ ಆಯಿತು ಎಂದು ಹೇಳುವ ರಸ್ತೆ ಮೈಸೂರು– ಹುಣಸೂರು ಮುಖ್ಯ ರಸ್ತೆ ಎಂದರೆ ಸರಿ. ಅಲ್ಲಿ ಹೆಚ್ಚಿನ ವಾಹನಗಳು ತಿರುಗಾಡುತ್ತಿರುತ್ತವೆ

ಎಂದರೆ ಸರಿ. ಅಲಿ ಅನ್ನಪೂರ್ಣ ಹೊಟೇಲ್ ಮತ್ತು ಕೃಷ್ಣ ಕೆಫೆ ಇರುವುದರಿದ ಅಲ್ಲಿ ಹೆಚ್ಚಿನ ಜನ ಸಂಧಣಿ ಇರುತ್ತದೆ ಎಂದರೆ ಸರಿ.

ಅಪಘಾತದ ಆಯಿತು ಎಂದು ಹೇಳಲಾದ ರಸ್ತೆ ಹುಣಸೂರಿನಿಂದ ಮೈಸೂರಿಗೆ ಹೋಗುವಾಗ ಏರು ರಸ್ತೆಯಾಗಿರುತ್ತದೆ ಎಂದರೆ ಸರಿಯಲ್ಲ, ಅದು ಸಮತಟ್ಟಾದ ರಸ್ತೆ ಆಗಿದೆ ಎನ್ನುತ್ತಾರೆ. ಕೃಷ್ಣಸ ಕೆಫೆ ಇರುವ ರಸ್ತೆ ಕೂಡ ಸಮತಾಟ್ಟಾಗಿದೆ ಎಂದರೆ ಸರಿಯಲ್ಲ. ಮಧುಗಿರಿಕೊಪ್ಪಲು ಗೇಟ್ ನಿಂದ ಮಧುಗಿರಿ ಕೊಪ್ಪಲು ಗ್ರಾಮಕ್ಕೆ ಹೋಗುವ ರಸ್ತೆ ಇದೆ ಎಂದರೆ ಸರಿ. ಸದರಿ ರಸ್ತೆ ಉತ್ತರ ಹುಣಸೂರಿನಿಂದ ಮೈಸೂರು ಕಡೆಗೆ ಹೋಗುವ ರಸ್ತೆಯ ಉತ್ತರ ದಿಕ್ಕಿಗೆ ಇದೆ ಎಂದರೆ ಸರಿ. ಮಧುಗಿರಿಕೊಪ್ಪಲು ಗೇಟ್ ನಿಂದ 500 ಅಡಿ ಹಿಂದಕ್ಕೆ ಅಣ್ಣಯ್ಯಾಚಾರಿ ರವರ ಮನೆ ಹುಣಸೂರು–ಮೈಸೂರು ರಸ್ತೆಯಲ್ಲೆ ಇರುತ್ತದೆ. ಅಲ್ಲಿ ಹೆಚ್ಚಿನ ಜನ ಸಂಧಣಿ ಇರುವ ರಸ್ತೆ ಹಾಗೂ ಏರು ರಸ್ತೆ ಆದ ಕಾರಣ ಅಲ್ಲಿ ಹುಣಸೂರಿನಿಂದ ಹೋಗುವ ಯಾವುದೆ ವಾಹನಗಳು ವೇಗವಾಗಿ ಚಲಾಯಿಸಲು ಆಗುವುದಿಲ್ಲ ಎಂದರೆ ಸರಿಯಲ್ಲ.

ಠಾಣೆಗೆ ಹೋದಾಗ ಪೊಲೀಸರು ಸಹಿಯನ್ನು 3–4 ಕಡೆ ಹಾಕಿಸಿಕೊಂಡಿದ್ದರು. ಹಾಗೆ ಯಾವ ಯಾವ ದಾಖಲೆಗೆ ಸಹಿ ಹಾಕಿಸಿಕೊಂಡರು ಎಂದು ನನಗೆ ಗೊತ್ತಿಲ್ಲ. ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿಕೊಂಡಿದ್ದರು ಎಂದು ಹೇಳಿದ್ದು, ಸದರಿ ಸಹಿಗಳ ಪೈಕಿ ನಿಪಿ. 7(ಎ) ಸಹಿ ಕೂಡ ಒಂದು ಎಂದರೆ ಸರಿ. ನನ್ನ ಸಮಕ್ಷಮವಾಗಲಿ, ಚಾಸಾ 5 ಮತ್ತು 6 ರವರ ಸಮಕ್ಷಮ ಆಗಲಿ ಸ್ಥಳದಲ್ಲಿ ಯಾವುದೆ ಮಹಜರ್ ಕ್ರಮ ಜರುಗಿಸದಿದ್ದರೂ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಣ್ಣ ಅಣ್ಣಯ್ಯಾಚಾರಿ ತೀರಿಕೊಂಡ ಕಾರಣ ಅವರ ಮಕ್ಕಳು ಪರಿಹಾರ ಕೇಸು ಹಾಕಿದ್ದಾರೆ ಎಂದರೆ ಸರಿ. ಸದರಿ ಕೇಸ್ ನಲ್ಲಿ ಅವರಿಗೆ ಪರಿಹಾರ ಸಿಗಲಿ ಎಂದು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನ್ಯಾಯಾಲಯದ ಮುಂದೆ ನನ್ನ ಮೂಲಕ ನಿಶಾನೆಗೊಳಪಡಿದ ದಾಖಲೆಗಳನ್ನು ಪೊಲೀಸರ ಜೊತೆ ಸೇರಿ ಸೃಷ್ಟಿಸಿಕೊಳ್ಳಲಾಗಿದೆ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ಆರೋಪಿಯ ಯಾವುದೆ ಅಜಾಗರೂಕತೆ, ನಿರ್ಲಕ್ಷತೆ ಕಂಡು ಬರದಿದ್ದರೂ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ಇದೆ ಮೊದಲ ಬಾರಿಗೆ ನೋಡಿರುತ್ತೇನೆ ಎಂದರೆ ಸಾಕ್ಷಿ ಠಾಣೆಯಲ್ಲಿಯೂ ಕೂಡ ನೊಾಡಿದ್ದೇನೆ ಎನ್ನುತ್ತಾರೆ.

**ಮರುವಿಚಾರಣೆ ಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಭಾಗ್ಯಮ್ಮ)
1 ನೇ ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.ಹುಣಸೂರು.